# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 154 | Pages. 2 | Date: 26-05-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 154 – ಪುಟಗಳು : 2 | 26-05-2026 | ಮಂಗಳವಾರ | Ph: 8762954248 | ದರ : ₹1


# ಬಡಾವಣೆಗೆ ಭೂಮಿ ಕೊಟ್ಟವರ ಊರಿಗೆ ಹುಡಾ ಭೇಟಿ

## ನಿವೇಶನ ಹಂಚಿಕೆಗೆ ರೈತರ ತೀವ್ರ ವಿರೋಧ | ಜೂನ್ 2 ರಿಂದ ಪ್ರವಾಸ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನೂತನವಾಗಿ ನಿರ್ಮಿಸಿರುವ ಬಿಜಿಎಸ್‌ಕೆ ಬಡಾವಣೆಗೆ ಭೂಮಿ ನೀಡಿರುವ ರೈತರ ಅಹವಾಲು ಆಲಿಸಲು ಜೂನ್ 2ರಿಂದ ಪ್ರವಾಸ ಕೈಗೊಳ್ಳುವುದಾಗಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಟೇಲ್ ಶಿವಪ್ಪ ಹೇಳಿದರು.

ಜೂನ್ 18ರಂದು ನಿವೇಶನ ಹಂಚಿಕೆ ಮಾಡುವುದಾಗಿ ಘೋಷಿಸಿದ್ದರಿಂದ ಆಕ್ರೋಶಗೊಂಡ ರೈತರು ಸೋಮವಾರ ಹುಡಾ ಕಚೇರಿಯಲ್ಲಿ ಜೋರು ವಾಗ್ವಾದ ನಡೆಸಿದರು. ಈ ವೇಳೆ ಮಾತನಾಡಿದ ಪಟೇಲ್ ಶಿವಪ್ಪ ಅವರು, ಭೂಮಿ ನೀಡಿರುವ ರೈತರಿಗೆ ತೊಂದರೆಯಾಗದ ರೀತಿ ನಿವೇಶನ ಹಂಚಿಕೆ ಮಾಡಲಾಗುವುದು. ಈ ಸಂಬಂಧ ರೈತರ ಅಹವಾಲು ಸ್ವೀಕರಿಸಲು ಜೂನ್ 2 ರಿಂದ ಹಳ್ಳಿಗಳಿಗೆ ಭೇಟಿ ನೀಡಲಾಗುವುದು. ರೈತರಿಗೆ ತೊಂದರೆಯಾಗುವ ಯಾವ ನಿರ್ಧಾರವನ್ನು ನಾವು ಕೈಗೊಳ್ಳುವುದಿಲ್ಲ. ಜೂನ್ 18ರ ಆಸುಪಾಸಿನಲ್ಲಿ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಇ-ಲಾಟರಿ ಮೂಲಕ ನಿವೇಶನ ಹಂಚಲು ಸಿದ್ಧತೆ ನಡೆದಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಇನ್ನೊಮ್ಮೆ ಚರ್ಚಿಸಲಾಗುವುದು ಎಂದರು.

### ರೈತರಿಗೆ ಅನ್ಯಾಯವಾದರೆ ಸಹಿಸಲ್ಲ

ನಿವೇಶನ ಹಂಚಿಕೆಗೆ ತರಾತುರಿ ನಿರ್ಧಾರ ಕೈಗೊಂಡಿದ್ದು, ಭೂಮಿ ನೀಡಿದ ರೈತರಿಗೆ ನಿವೇಶನ ಹಂಚಿಕೆಯಲ್ಲಿ ಅನ್ಯಾಯವಾದರೆ ಸಹಿಸುವುದಿಲ್ಲ ಎಂದು ರೈತರು ಪಟ್ಟು ಹಿಡಿದಿದ್ದಾರೆ. ಜೂನ್ 18ರಂದು ನಿವೇಶನ ಹಂಚುವುದಾಗಿ ಮಾಧ್ಯಮ ಗೋಷ್ಠಿಯಲ್ಲಿ ಹೇಳಲಾಗಿದೆ. ಈ ಸಂಬಂಧ ರೈತರೊಂದಿಗೆ ಚರ್ಚೆ ನಡೆಸಿದ್ದೀರಾ. ಕಳೆದ ಆರು ವರ್ಷಗಳಿಂದ ರೈತರನ್ನು ಯಾರೂ ಮಾತನಾಡಿಸಿಲ್ಲ. ಈಗ ಏಕಾಏಕಿ ದಿನಾಂಕ ಘೋಷಿಸಿದರೆ ಭಾರೀ ಬೆಲೆಯ ಭೂಮಿ ನೀಡಿರುವ ರೈತರ ಗತಿ ಏನಾಗಬೇಕು. ಶೇ. 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ಮಾಡುವ ಒಪ್ಪಂದ ಆಗಿದೆಯಾದರೂ ರೈತರಿಗೆ ಯಾವ ರೀತಿ ವಿತರಿಸುತ್ತೀರಿ ಎಂಬ ಮಾಹಿತಿ ನೀಡಬೇಕಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು.



1160 ಎಕರೆ ಭೂಮಿಯನ್ನು ಬಡಾವಣೆಗೆ ನೀಡಲಾಗಿದೆ. ರೈತರಿಗೆ ಯಾವ ರೀತಿ ನಿವೇಶನ ಕೊಡುತ್ತೀರಿ ಎಂದು ಕೇಳುತ್ತಲೇ ಇದ್ದೆವು. ಆದರೆ ನಮ್ಮ ವಿಶ್ವಾಸ ಪಡೆಯದೇ ನಿರ್ಧಾರ ಕೈಗೊಂಡಿದ್ದಾರೆ. ಚರಂಡಿ, ಕುಡಿಯುವ ನೀರು, ರಸ್ತೆ ಸೇರಿ ಮೂಲಸೌಲಭ್ಯ ಕಲ್ಪಿಸಿಲ್ಲ. ಕೆಲಸ ಪೂರ್ಣಗೊಳ್ಳದೆ ನಿವೇಶನ ಹಂಚಿಕೆ ಮಾಡುತ್ತಿರುವುದು ಏಕೆ ಎಂದು ರೈತರು ಪ್ರಶ್ನಿಸಿದರು. ಭೂಮಿ ಕಳೆದುಕೊಂಡ ರೈತನಿಗೆ ತನ್ನ ಜಮೀನಿನ ಅಕ್ಕಪಕ್ಕದಲ್ಲೇ ನಿವೇಶನ ನೀಡಬೇಕು. ಆ ಜಾಗ ಪಾರ್ಕ್, ರಸ್ತೆಗೆ ಬಳಕೆಯಾಗಿದ್ದರೆ ಹತ್ತಿರದಲ್ಲೇ ನೀಡಬೇಕು. ಸ್ಮಶಾನಕ್ಕಾಗಿ ಬಳಕೆಯಾಗುತ್ತಿರುವ ಭೂಮಿಯ ಸುತ್ತ ಸ್ವಲ್ಪ ಜಾಗ ಖಾಲಿ ಬಿಟ್ಟು ನಿವೇಶನ ಹಂಚಬೇಕೆಂದು ಆಗ್ರಹಿಸಿದರು.

### ರೈತರಿಗೆ ಸಮಾಧಾನ ಆದರಷ್ಟೇ ಹಂಚಿಕೆ

**ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ಬಡಾವಣೆಗೆ ಜಮೀನು ನೀಡಿರುವ ಬೂವನಹಳ್ಳಿ, ಗೇಕರವಳ್ಳಿ, ಸಮುದ್ರವಳ್ಳಿ ಹಾಗೂ ಕೆಂಚಟ್ಟಹಳ್ಳಿ ಗ್ರಾಮದ ರೈತರು ಕಷ್ಟಪಟ್ಟು ಉಳಿಸಿಕೊಂಡು ಬಂದಿರುವ ಜಮೀನನ್ನು ನೀಡಿದ್ದಾರೆ. ಅವರಿಗೆ ಅನ್ಯಾಯವಾಗಲು ಯಾವ ಕಾರಣಕ್ಕೂ ಬಿಡುವುದಿಲ್ಲ. ಸರ್ಕಾರ ಯಾವತ್ತಿಗೂ ರೈತರ ಪರವಾಗಿದ್ದು ಶೇ. 50:50 ಅನುಪಾತ ಇದ್ದರೂ ರೈತರಿಗೆ ಸಮಾಧಾನವಾಗುವ ರೀತಿಯಲ್ಲಿ ನಿವೇಶನ ಹಂಚಿಕೆ ಮಾಡಲಾಗುವುದೆಂದು ಭರವಸೆ ನೀಡಿದರು.**

### ಮೂಲಸೌಕರ್ಯ ಕಲ್ಪಿಸಲು ಕ್ರಮ

ನೂತನ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸಲು ಕ್ರಮ ವಹಿಸಲಾಗಿದೆ. ಜೂನ್ 18ಕ್ಕೆ ನಿವೇಶನ ಹಂಚಿಕೆಯಾಗುತ್ತದೆ ಎಂದರೆ ಆಗಿನಿಂದಲೇ ಎಲ್ಲಾ ಪ್ರಕ್ರಿಯೆ ಮುಗಿಯುವುದಿಲ್ಲ.

ಸಮರ್ಪಕ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಒಂದು ವರ್ಷದ ವರೆಗೆ ಸಮಯ ಬೇಕಾಗುತ್ತದೆ. ಹೇಮಾವತಿ ಜಲಾಶಯದಿಂದ ಕುಡಿಯುವ ನೀರು ಪ್ರತಿದಿನ 13 ಎಂಎಲ್‌ಡಿ ಪೂರೈಕೆಯಾಗಲಿದೆ. ಅದರ ಹೊರತಾಗಿ ಬೋರವೆಲ್ ಕೊರೆಸಲು ಕ್ರಮ ಕೈಗೊಳ್ಳಲಾಗುವುದು.

ಬಾಕಿ ಇರುವ ಚರಂಡಿ, ರಸ್ತೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮುಗಿಸಲಾಗುವುದು. ನಿವೇಶನ ಹಂಚಿಕೆಯ ದಿನಾಂಕ ಘೋಷಿಸಿದರೆ ಸರ್ಕಾರ ಹಾಗೂ ಗುತ್ತಿಗೆದಾರರು ಗಂಭೀರವಾಗಿ ಪರಿಗಣಿಸಿ ಬಾಕಿ ಕೆಲಸ ಮುಗಿಸಲು ಆಸಕ್ತಿ ತೋರುತ್ತಾರೆಂಬ ಕಾರಣಕ್ಕೆ ಜೂನ್ 18 ದಿನ ನಿಗದಿಪಡಿಸಿದ್ದೇವೆ ಹೊರತು ರೈತರಿಗೆ ಮೋಸ ಮಾಡುವ ಉದ್ದೇಶದಿಂದ ಅಲ್ಲವೆಂದು ಸ್ಪಷ್ಟಪಡಿಸಿದರು.

ಮೂಲೆ ನಿವೇಶನ ಹಂಚಿಕೆ ಬಗ್ಗೆ ರೈತರು ಪ್ರಸ್ತಾಪಿಸಿರುವ ಸಂಬಂಧ ಮುಂದಿನ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ರೈತರಿಗೆ ಆದ್ಯತೆ ನೀಡುವುದರಲ್ಲಿ ಯಾವ ಅನುಮಾನವಿಲ್ಲ. ಎಸ್.ಎಂ.ಕೃಷ್ಣ ಹಾಗು ಬಿಜಿಎಸ್‌ಕೆ ಬಡಾವಣೆ ಸೇರಿದರೆ ಸುಮಾರು 2 ಲಕ್ಷ ಜನರು ವಾಸಿಸುತ್ತಾರೆ. ಕೇವಲ ಎರಡು ಬಡಾವಣೆಯಿಂದ ಲಕ್ಷಾಂತರ ಜನರು ವಾಸಿಸುವಂತಾಗುವುದು ಹಾಸನದಲ್ಲಿ ಮಾತ್ರ. ಭವಿಷ್ಯದಲ್ಲಿ ಅದು ವಿಧಾನಸಭಾ ಕ್ಷೇತ್ರವಾಗಿ ಬೆಳವಣಿಗೆ ಹೊಂದಬಹುದು ಎಂದರು.

# ಮೇ 31 ರಂದು ಬೆಂಗಳೂರಿನಲ್ಲಿ ಶಾಸ್ತ್ರೀಯ ನೃತ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ಮೈದಾನದಲ್ಲಿ ಮೇ 31ರ ಭಾನುವಾರ ಇಂಟರ್ ನ್ಯಾಷಿನಲ್ ಬುಕ್ ಆಫ್ ರೆಕಾರ್ಡ್ ವಿಶ್ವದಾಖಲೆಯ ಪ್ರಯತ್ನವಾಗಿ ದೇಶಭಕ್ತಿ ಗೀತೆಗಳಿಗೆ ಕ್ಲಾಸಿಕಲ್ ಡ್ಯಾನ್ಸ್ ಹಮ್ಮಿಕೊಳ್ಳಲಾಗಿದೆ ಎಂದು ಅಂತಾರಾಷ್ಟ್ರೀಯ ಭರತ ನಾಟ್ಯ ಕಲಾವಿದೆ. ಡಾ.ಸ್ವಾತಿ ಪಿ.ಭಾರಧ್ವಾಜ್ ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ರಾಷ್ಟ್ರಭಕ್ತಿ ಗೀತೆಗಳಿಗೆ ಶಾಸ್ತ್ರೀಯ ನೃತ್ಯ ರೂಪದಲ್ಲಿ ಏಕಕಾಲದಲ್ಲಿ ಸುಮಾರು 345 ಕಲಾವಿದರು ಹೆಜ್ಜೆ ಹಾಕುವ ಮೂಲಕ ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ನಲ್ಲಿ ವಿಶ್ವದಾಖಲೆ ನಿರ್ಮಿಸಲು ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ ಸಜ್ಜಾಗಿದೆ ಎಂದು ತಿಳಿಸಿದರು.

ಅಂದು ಸಂಜೆ 4 ಗಂಟೆಗೆ ಭವ್ಯ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಲಾರ್ಜೆಸ್ಟ್ ನಂಬರ್ ಆಫ್ ಪಾರ್ಟಿಸಿಪೆಂಟ್ಸ್ ಪರ್ಫಾರ್ಮಿಂಗ್ ಪೇಟ್ರಿಯಾಟಿಕ್ ಸಾಂಗ್ಸ್ ಇನ್ ಕ್ಲಾಸಿಕಲ್ ಡ್ಯಾನ್ಸ್ ಫಾರ್ಮ್ ವಿಭಾಗದಲ್ಲಿ ವಿಶ್ವದಾಖಲೆ ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

ಹೈ ಕೋರ್ಟ್ ಹಿರಿಯ ನ್ಯಾಯಮೂರ್ತಿ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. 15 ನಿಮಿಷಗಳ ಪ್ರದರ್ಶನದಲ್ಲಿ 5 ದೇಶಭಕ್ತಿ ಗೀತೆಗಳಿಗೆ ನೃತ್ಯ ಮಾಡಲಾಗುವುದು. ವಿದೇಶದಿಂದಲೂ ಕಲಾವಿದರು ಆಗಮಿಸಲಿದ್ದಾರೆ ಎಂದ ಅವರು, ಕಾರ್ಯಕ್ರಮ ಮುಗಿದ ನಂತರ ಅಲ್ಲೇ ತೀರ್ಪು ಹೊರಬೀಳಲಿದೆ. ಮತ್ತೆ ಈ ಕಾರ್ಯಕ್ರಮ ವಿಶ್ವದಾಖಲೆ ನಿರ್ಮಾಣ ಮಾಡಿತೇ, ಇಲ್ಲವೇ ಎಂಬುದೂ ನಿರ್ಧಾರವಾಗಲಿದೆ ಎಂದರು.

ಈಗಾಗಲೇ ಮಂತ್ರಾಲಯದಲ್ಲಿ ಏಕಕಾಲದಲ್ಲಿ 300 ನೃತ್ಯ ಕಲಾವಿದರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ನಾಮ ರಾಮಾಯಣ ಗೀತೆಗೆ ನೃತ್ಯ ಪ್ರದರ್ಶನ ನೀಡುವ ಮೂಲಕ ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ ಸಾಧನೆ ಸೇರಿದಂತೆ ಹಲವು ದಾಖಲೆಗಳನ್ನು ಅಕಾಡೆಮಿ ನಿರ್ಮಿಸಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷೆ ಅನಿತಾ ಪ್ರಕಾಶ್, ಸಂಚಾಲಕ ಪ್ರಕಾಶ್ ಇದ್ದರು.

# ಎಂಟಿಇಎಸ್: ಮೂವರು ನಿರ್ದೇಶಕರ ಅಮಾನತು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಣ ದುರ್ಬಳಕೆ ಆರೋಪ ಹಿನ್ನೆಲೆಯಲ್ಲಿ ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಮೂವರು ನಿರ್ದೇಶಕರನ್ನು ಅಮಾನತು ಮಾಡಲಾಗಿದೆ ಎಂದು ನೂತನ ಅಧ್ಯಕ್ಷ ಬಿ.ಆರ್.ಗುರುದೇವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಸಂಸ್ಥೆಯ ರೆಜುಲೇಷನ್ ಬುಕ್ ಸೇರಿದಂತೆ ಹಲವಾರು ದಾಖಲಾತಿ ಇಲ್ಲವಾಗಿವೆ. ಬೈಲಾ ನಿಯಮ ಉಲ್ಲಂಘಿಸಿ, ಕಾರ್ಯಕಾರಿ ಸಮಿತಿ ಗಮನಕ್ಕೆ ತಾರದೆ ಸುಮಾರು 100 ಸದಸ್ಯರನ್ನು ಕಾನೂನು ಬಾಹಿರವಾಗಿ ನೇಮಕ ಮಾಡಿದ್ದಾರೆ ಎಂದು ದೂರಿದ ಅವರು, ಅದನ್ನು ನಾವು ದಿಕ್ಕರಿಸಿದ್ದೇವೆ ಎಂದರು.

ಎವಿಕೆ ಕಾಲೇಜು ಸಂಕೀರ್ಣದಲ್ಲಿ ಕುಮಾರ್ ಕೊಠಡಿ ಬಾಡಿಗೆ ಪಡೆದು, ಬೇರೆಯವರಿಗೆ ಸಬ್ ಲೀಜ್ ಕೊಟ್ಟಿದ್ದಾರೆ. ಅವರು 2014 ರಿಂದ ಬಾಡಿಗೆ ನೀಡದೆ ಸುಮಾರು ಎರಡೂವರೆ ಕೋಟಿ ಬಾಕಿ ಉಳಿಸಿಕೊಂಡಿದ್ದರೂ, ಮತ್ತೆ ಅವರಿಗೆ 90 ಲಕ್ಷ ಚೆಕ್ ನೀಡಿದ್ದಾರೆ. ಈ ಎಲ್ಲ ಕಾರಣಗಳಿಂದ ನಿರ್ದೇಶಕ ಸ್ಥಾನದಿಂದ ಅಮಾನತು ಮಾಡಲಾಗಿದೆ ಎಂದು ಘೋಷಿಸಿದರು.



ಸಮಿತಿಯೊಂದನ್ನು ರಚಿಸಿ ಈ ಬಗ್ಗೆ ತನಿಖೆ ಮಾಡಿಸಲಾಗುವುದು. ಅಧ್ಯಕ್ಷ ಕಾರ್ಯದರ್ಶಿ ಅಮಾನತು ಕಮಿಟಿ ರಚನೆ, ಖಜಾಂಜಿ, ನಿರ್ದೇಶಕ ಸ್ಥಾನದಿಂದ ಮೂವರು ಅಮಾನತು, ಆರ್ ಟಿಡಿ ಜಗದೀಶ್ ಪಾರ್ವನಾಥ್, ರಾಜಶೇಖರ ಅನ್ನೋ ನಿರ್ದೇಶಕ ಮಾಡಿ ನೇಮಕ ಕಾನೂನು ಬಾಹಿರ, 70 ಲಕ್ಷ ಡ್ರಾ ಕಾನೂನು ಬಾಹಿರ, ಅದರ ಬಗ್ಗೆ ತನಿಖೆ ಮಾಡಲಾಗುವುದು, ತಪ್ಪು ನಡೆದಿರುವುದು ಕಂಡು ಬಂದರ ಕಠಿಣ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಹಿಂದೆ ಅವ್ಯವಹಾರ ನಡೆದಿದೆ ಎಂದು ನಮ್ಮ ಮೇಲೆ ಆರೋಪ ಮಾಡಿದ್ದಾರೆ. ಆಗ ಆರ್ .ಟಿ.ದ್ಯಾವೇಗೌಡ ಕಾರ್ಯದರ್ಶಿ ಆಗಿದ್ದರು. ಅಂದ್ರೆ, ಅವರೂ ಅಕ್ರಮ ಭಾಗಿಯಾಗಿದ್ದಾರಾ ಎಂದು ಗುರುದೇವ್ ಮಾರ್ಮಿಕವಾಗಿ ಪ್ರಶ್ನಿಸಿದರು.

ಮಾಜಿ ಅಧ್ಯಕ್ಷ ಅಶೋಕ ಹಾರನಹಳ್ಳಿ ಮಾತನಾಡಿ, ಕಾರ್ಯಕಾರಿ ಸಮಿತಿ ಗಮನಕ್ಕೆ ಬಾರದೆ ಅವರು ಅನೇಕ ನಿರ್ಧಾರ ಮಾಡಿದ್ದಾರೆ. ನಮ್ಮ ವಿರುದ್ಧ ಅವರು ಕೋಟಿ ಕೋಟಿ ದುರ್ಬಳಕೆ ಆರೋಪ ಮಾಡಿದ್ದಾರೆ. ಆದರೆ ಅದಕ್ಕೆ ದಾಖಲೆ ಎಲ್ಲಿವೆ ಎಂದು ಪ್ರಶ್ನಿಸಿದ ಅವರು, ಲಾಭಾಂಶವಾಗಿ ಅವರು ಯಾವುದೇ ಹಣ ಇಟ್ಟಿಲ್ಲ.

ವಾರ್ಷಿಕವಾಗಿ ಕಾಲೇಜಿಗೆ ಸುಮಾರು 50 ಕೋಟಿ ಸಂಗ್ರಹ ಆಗಮಿಸಿದೆ. ಇದರಲ್ಲಿ 30 ಕೋಟಿ ಸಂಬಳಕ್ಕೆ ಹೋದರೆ, ಉಳಿದದ್ದು ಸಂಶೋಧನೆ ಹಾಗೂ ಕಾಲೇಜು ಅಭಿವೃದ್ಧಿಗಾಗಿ ಬಳಕೆ ಆಗಲಿದೆ ಎಂದು ಸ್ಪಷ್ಟನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಜಿ.ಟಿ.ಕುಮಾರ್, ಜಂಟಿ ಕಾರ್ಯದರ್ಶಿ ಜಿ.ಆರ್.ಶ್ರೀನಿವಾಸ್, ಖಜಾಂಚಿ, ಎಸ್.ಜಿ.ಶ್ರೀಧರ್ ಮೊದಲಾದವರಿದ್ದರು.

# ಮದ್ಯದ ನಶೆಯಲ್ಲಿ ದಾರಿ ತಪ್ಪಿದ ಬಾಲಕರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ವಾಟೆಗಂಡಿ ಗ್ರಾಮದಲ್ಲಿ ಸೋಮವಾರ ಮದ್ಯದ ನಶೆಯಲ್ಲಿ ಮೂವರು ಅಪ್ರಾಪ್ತರು ಸಾರ್ವಜನಿಕರೊಂದಿಗೆ ಅಸಭ್ಯವಾಗಿ ವರ್ತಿಸಿರುವ ಘಟನೆ ನಡೆದಿದೆ.

ಗಾಂಜಾ ಸೇವಿಸಿ ಅನಾಗರಿಕರಂತೆ ವರ್ತಿಸಬಹುದೆಂದು ಭಾವಿಸಲಾಗಿತ್ತು. ಮೂವರು ಒಂದು ಕಡೆ ಕುಳಿತು ಜನರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಘಟನೆಯ ವಿಡಿಯೋ ಚಿತ್ರೀಕರಿಸುತ್ತಿದ್ದ ವೇಳೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಕ್ಕೆ ಜನರು ಧರ್ಮದೇಟು ನೀಡಿದರು. ನಶೆಯ ಪ್ರಮಾಣ ಹೆಚ್ಚಿದ್ದ ಪರಿಣಾಮ ಓರ್ವ ಸ್ಥಳದಲ್ಲೇ ಪ್ರಜ್ಞೆ ತಪ್ಪಿದಂತೆ ಮಲಗಿದ್ದ. ಮತ್ತೊಬ್ಬ ತಲೆ ಕೆಳಗೆ ಹಾಕಿ ಬಹಳ ಹೊತ್ತು ಸುಮ್ಮನೆ ಕುಳಿತಿದ್ದ. ಇನ್ನೊಬ್ಬ ಮಾತ್ರ ಜೋರಾಗಿ ಮಾತನಾಡುತ್ತಿದ್ದ. ಪೊಲೀಸರು, ಸಾರ್ವಜನಿಕರನ್ನು ಅಪದ್ಧ ಪದಗಳಿಂದ ನಿಂದಿಸುತ್ತಿದ್ದ. ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಸ್ಥಳಕ್ಕೆ ಬಂದ ಪೊಲೀಸರು ಮೂವರನ್ನು ವಶಕ್ಕೆ ಪಡೆದರು. ವೈದ್ಯಕೀಯ ಪರೀಕ್ಷೆ ವೇಳೆ ಅಪ್ರಾಪ್ತರು ಮದ್ಯ ಸೇವಿಸಿದ್ದು ದೃಢಪಟ್ಟಿದೆ. ಬಾಲಕರಿಗೆ ಬೈಕ್ ಕೊಟ್ಟ ಪ್ರಕರಣ ಸಂಬಂಧ ಪೋಷಕರ ವಿರುದ್ಧ ದೂರು ದಾಖಲಾಗಿದೆ.

# ವಿಶ್ವದ ನಂಬಿಕಸ್ಥ ವ್ಯಕ್ತಿಗಳಲ್ಲಿ ಪ್ರಧಾನಿ ಮೋದಿ ಮೊದಲು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿಶ್ವದ ನಂಬಿಕಸ್ಥ ಜನನಾಯಕರಲ್ಲಿ ಪ್ರಧಾನಿ ನರೇಂದ್ರ ಮೋದಿ ಮೊದಲ ಸ್ಥಾನದಲ್ಲಿದ್ದಾರೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಹೇಳಿದರು.

ತಾಲ್ಲೂಕಿನ ಅದ್ವಯ ರೆಸಾರ್ಟ್‌ನಲ್ಲಿ ಹಮ್ಮಿಕೊಂಡಿರುವ ಜಿಲ್ಲಾ ಪ್ರಶಿಕ್ಷಣ ವರ್ಗದಲ್ಲಿ ಸೋಮವಾರ ಮಾತನಾಡಿ, ದೇಶಕ್ಕೆ ಮೋದಿ ಸರ್ಕಾರದಿಂದ ಹಲವಾರು ಜನಕಲ್ಯಾಣ ಯೋಜನೆಗಳು ಜಾರಿಯಾಗಿವೆ. ಪ್ರಧಾನಮಂತ್ರಿ ಉಜ್ವಲ ಯೋಜನೆ, ಉನ್ನತ ಶಿಕ್ಷಣಕ್ಕೆ ಒತ್ತು, ರಸ್ತೆ ನಿರ್ಮಾಣ, ಜನೌಷಧಿ ಕೇಂದ್ರ, ಹಾಗೂ ಕೊರೊನಾ ಲಸಿಕೆ, ಡಿಜಿಟಲ್ ಇಂಡಿಯಾ, ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು, ಬಾಲಾಕೋಟ್ ಸರ್ಜಿಕಲ್ ಸ್ಟ್ರೈಕ್, ಜಲ್ ಜೀವನ್ ಮಿಷನ್ ಸೇರಿದಂತೆ ಹತ್ತಾರು ಯೋಜನೆಗಳನ್ನು ಪ್ರಧಾನಿ ಅನುಷ್ಠಾನಗೊಳಿಸಿದ್ದಾರೆ ಎಂದರು.



ಶಾಸಕರಾದ ಸಿಮೆಂಟ್ ಮಂಜು, ಎಚ್.ಕೆ.ಸುರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮತ್ತಿತರರಿದ್ದರು.

# ವರುಣ ಮುನಿಸು: ಬರಗಾಲದ ಆತಂಕ ವ್ಯಕ್ತಪಡಿಸಿದ ಶಾಸಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಈ ಬಾರಿ ತಾಲ್ಲೂಕು ವ್ಯಾಪ್ತಿಯಲ್ಲಿ ಪೂರ್ವ ಮುಂಗಾರು ಸುರಿಯದೆ ಬರಗಾಲದ ಛಾಯೆ ಆವರಿಸಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆಯಿಂದ 2026-27ನೇ ಸಾಲಿನ ಆಹಾರ ಮತ್ತು ಪೌಷ್ಟಿಕ ಭದ್ರತಾ ಯೋಜನೆಯಡಿ ಆಯೋಜಿಸಿದ್ದ ಅಲಸಂದೆ ಪ್ರಾತ್ಯಕ್ಷತೆ ಹಾಗೂ ಪರಿಕರಗಳ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಏಪ್ರಿಲ್‌ನಲ್ಲೇ ಮಳೆ ಪ್ರಾರಂಭವಾಗಬೇಕಿತ್ತು. ಜೂನ್ ತಿಂಗಳು ಸಮೀಪಿಸಿದರೂ ಮಳೆಯಾಗುವ ಲಕ್ಷಣ ಕಂಡುಬರುತ್ತಿಲ್ಲ. ಇತ್ತೀಚೆಗಷ್ಟೇ ಮಳೆ ಪ್ರಾರಂಭವಾಗಿದ್ದರೂ ಸಹ ಕೆಲವೆಡೆ ಮಾತ್ರ ಸಾಧಾರಣವಾಗಿ ಸುರಿಯುತ್ತಿದೆ. ಪರಿಣಾಮ ಮುಂಗಾರು ಹಂಗಾಮಿನ ಯಾವುದೇ ಬೆಳೆಗಳು ಇದುವರೆಗೂ ಬಿತ್ತನೆ ಕಂಡಿಲ್ಲ. ಅದರಿಂದ ರೈತರಿಗೆ ತೊಂದರೆಯಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು.



ಎಫ್‌ಎನ್‌ಎಸ್ ಯೋಜನೆಯಡಿ ಉದಯಪುರ ಸೇರಿ ತಾಲ್ಲೂಕಿನ 7 ಹೋಬಳಿಗಳಿಂದ ತಲಾ ಒಂದರಂತೆ ಶೆಟ್ಟಿಹಳ್ಳಿ, ಉತ್ತದಹಳ್ಳಿ, ದ್ಯಾವಲಾಪುರ, ಉಗೇನಹಳ್ಳಿ ಹಾಗೂ ಡಿ.ಹೊನ್ನಮಾರನಹಳ್ಳಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. 1 ಹೆಕ್ಟೇರ್‌ಗೆ 10 ಕೆ.ಜಿ ಅಲಸಂದೆ ಹಾಗೂ ಇತರ ಪರಿಕರಗಳನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದರು.

ತೆಂಗಿನ ತೋಟಗಳನ್ನು ಟ್ರ್ಯಾಕ್ಟರ್‌ನ 5 ಹಲ್ಲಿನ ನೇಗಿಲಿನಿಂದ ಉಳುಮೆ ಮಾಡುವುದನ್ನು ನಿಲ್ಲಿಸಬೇಕು. ಅದರಿಂದ ತೆಂಗಿನ ಮರಗಳ ಬೇರುಗಳು ತುಂಡಾಗಲಿದ್ದು ಮರಗಳಿಗೆ ಅಪಾಯವಾಗಲಿದೆ. ಇನ್ನು ತೆಂಗಿನ ಮರಗಳಿಗೆ ರಸಗೊಬ್ಬರ ನೀಡುವುದು ಅಪಾಯಕಾರಿ. ಬದಲಿಗೆ ಹುರುಳಿ ಹಾಗೂ ಸೆಣಬು ಬಿತ್ತನೆ ಮಾಡಿ ಉತ್ತಮವಾಗಿ ಬೆಳೆದ ನಂತರ ರೋಟರ್ ವೇಟರ್ ಮೂಲಕ ಹದವಾಗಿ ಉಳುಮೆ ಮಾಡಿಸಿದರೆ ಮಣ್ಣಿನ ಫಲವತ್ತತೆ ಹೆಚ್ಚಲಿದೆ ಎಂದು ಸಲಹೆ ನೀಡಿದರು.

### ನೀರಿನ ಮಿತ ಬಳಕೆ ಅಗತ್ಯ

ತಾಲ್ಲೂಕಿನಾದ್ಯಂತ ಮಳೆ ಕೊರತೆ ತೀವ್ರವಾಗಿರುವ ಪರಿಣಾಮ ರೈತರು ತಮ್ಮ ಕೊಳವೆ ಬಾವಿಯಲ್ಲಿರುವ ನೀರನ್ನು ಮಿತವಾಗಿ ಬಳಸುವತ್ತ ಗಮನ ಹರಿಸಬೇಕು. ತೆಂಗಿನ ತೋಟ ಹಾಗು ಕೃಷಿ ಜಮೀನುಗಳಿಗೆ ಮನಬಂದಂತೆ ಹೇರಳವಾಗಿ ನೀರು ತುಂಬಿಸುವುದು ಬೇಡ. ಬದಲಿಗೆ ಹನಿ ನೀರಾವರಿ ಪದ್ಧತಿ ಹಾಗೂ ತುಂತುರು ನೀರಾವರಿ ವ್ಯವಸ್ಥೆಯೊಂದಿಗೆ ಬೆಳೆಗಳಿಗೆ ಅಗತ್ಯ ಹಾಗು ಅನುಗುಣವಾಗಿ ನೀರಾಯಿಸುವ ವ್ಯವಸ್ಥೆ ರೂಪಿಸಿಕೊಳ್ಳುವುದು ಒಳ್ಳೆಯದು. ಅದರಿಂದ ನೀರನ್ನು ಮಿತವಾಗಿ ಬಳಸಲು ಸಹಕಾರಿಯಾಗಲಿದೆ ಎಂದು ಕಿವಿಮಾತು ಹೇಳಿದರು.

ರಸಗೊಬ್ಬರ ಪೂರೈಕೆಗೆ ಮನವಿ: ರಾಜ್ಯದಲ್ಲಿ ರಸಗೊಬ್ಬರ ಕೊರತೆ ಕುರಿತು ಸಾಕಷ್ಟು ಚರ್ಚೆ ನಡೆಯುತ್ತಿದೆ. ನಮ್ಮ ತಾಲ್ಲೂಕಿಗೆ ವಾರ್ಷಿಕ 31,760 ಟನ್ ಗೊಬ್ಬರದ ಬೇಡಿಕೆ ಇದೆ. ಆದರೆ ಪ್ರಸ್ತುತ 4,980 ಟನ್ ಮಾತ್ರ ದಸ್ತಾನಿದೆ. ಶೇ.8 ರಷ್ಟು ಮಾತ್ರ ರಸಗೊಬ್ಬರ ದಾಸ್ತಾನಿದ್ದು ಮುಂದಿನ ದಿನಗಳಲ್ಲಿ ತಾಲ್ಲೂಕಿನ ರೈತರಿಗೆ ರಸಗೊಬ್ಬರದ ಅಭಾವ ತೀವ್ರವಾಗಿ ಕಾಡಲಿದೆ. ಕೇಂದ್ರ ಹಾಗು ರಾಜ್ಯ ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿ ರಸಗೊಬ್ಬರ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಸಹಾಯಕ ಕೃಷಿ ನಿರ್ದೇಶಕ ಮೋಹನ್ ಕುಮಾರ್, ವಿಎಸ್‌ಎಸ್ ಅಧ್ಯಕ್ಷ ರಾಮಚಂದ್ರ, ಕೃಷಿ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ರೈತರು ಹಾಜರಿದ್ದರು.

# ಇಂಧನ ಸಿಗದೆ ಕೃಷಿ ಚಟುವಟಿಕೆಗೆ ಹೊಡೆತ

## ಕ್ಯಾನ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ಸಿಗ್ತಿಲ್ಲ | ಕೊರತೆ ಇನ್ನೂ ಹೆಚ್ಚುವ ಭೀತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪಶ್ಚಿಮ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಸಂಘರ್ಷದ ಪರಿಣಾಮ ಪೆಟ್ರೋಲ್-ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದು, ಕೃಷಿ ಚಟುವಟಿಕೆಗೂ ಬಿಕ್ಕಟ್ಟಿನ ಬಿಸಿ ತಟ್ಟುತ್ತಿದೆ.

ಜಿಲ್ಲೆಯ ಪೆಟ್ರೋಲ್ ಬಂಕ್‌ಗಳಲ್ಲಿ ಕ್ಯಾನ್‌ಗಳಲ್ಲಿ ಪೆಟ್ರೋಲ್-ಡೀಸೆಲ್ ಕೊಡುವುದನ್ನು ಸ್ಥಗಿತಗೊಳಿಸಿರುವುದರಿಂದ ಜಮೀನು ಕೆಲಸ ಮಾಡುತ್ತಿದ್ದ ಯಂತ್ರಗಳು ಸ್ಥಗಿತಗೊಂಡಿವೆ. ಹತ್ತಾರು ಕಿ.ಮೀ. ದೂರದ ವರೆಗೆ ಯಂತ್ರಗಳನ್ನೇ ತಂದು ಇಂಧನ ತುಂಬಿಸಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಕ್ಯಾನ್‌ಗಳಲ್ಲಿ ಪೆಟ್ರೋಲ್-ಡೀಸೆಲ್ ನೀಡದಂತೆ ಆದೇಶವಾಗಿ 10 ದಿನ ಕಳೆದಿದ್ದರೂ ಈ ವರೆಗೆ ಅಷ್ಟಾಗಿ ಪಾಲನೆಯಾಗುತ್ತಿರಲಿಲ್ಲ. ಆದರೆ ಕಳೆದ ಎರಡು ದಿನಗಳಿಂದ ಕಾನೂನು ಕಠಿಣಗೊಳಿಸಲಾಗಿದೆ. ಹೀಗಾಗಿ ಗ್ರಾಮೀಣ ಭಾಗದ ಪೆಟ್ರೋಲ್ ಬಂಕ್‌ಗಳಲ್ಲಿ ರೈತರು-ಬಂಕ್ ಸಿಬಂದಿ ಮಧ್ಯೆ ವಾಗ್ವಾದ ನಡೆಯುತ್ತಿದೆ. ಮೊದಲೆಲ್ಲಾ ಲೋಡ್ ನಿಯಮಿತವಾಗಿ ಬರುತ್ತಿತ್ತು. ಈಗ ನಾಲ್ಕೈದು ದಿನ ತಡವಾಗುತ್ತಿದೆ. ಮುಂದೆ ಪೆಟ್ರೋಲ್ ಸಿಗುವುದೇ ಕಷ್ಟ ಎನ್ನುವಂತಾಗಿದೆ. ಇಂತಹ ಸಂದರ್ಭದಲ್ಲಿ ಜಿಲ್ಲಾಡಳಿತದ ಆದೇಶ ಪಾಲಿಸಬೇಕಲ್ಲವೇ ಎಂದು ಪೆಟ್ರೋಲ್ ಬಂಕ್ ಸಿಬ್ಬಂದಿ ಹೇಳುತ್ತಾರೆ. ಆದರೆ ಕೃಷಿ ಕೆಲಸಗಳಿಗೂ ಅಡ್ಡಿಪಡಿಸುವುದು ಎಷ್ಟು ಸರಿ ಎಂದು ರೈತರು ಗೋಳಾಡುತ್ತಿದ್ದಾರೆ.

ಕೃಷಿ ಹಾಗೂ ತೋಟಗಾರಿಕೆ ಕೆಲಸಕ್ಕೆ ರೈತರು ವೀಡ್ ಕಟ್ಟರ್, ಟ್ರ್ಯಾಕ್ಟರ್, ಟಿಲ್ಲರ್, ಸ್ಪ್ರೇಯರ್



ಮೊದಲಾದ ಯಂತ್ರಗಳನ್ನು ಬಳಸುತ್ತಾರೆ. ಇವುಗಳು ಕಾರ್ಯನಿರ್ವಹಿಸಬೇಕೆಂದರೆ ಪೆಟ್ರೋಲ್ ಅಥವಾ ಡೀಸೆಲ್ ಅತ್ಯಗತ್ಯ. ಇಂಧನ ಖಾಲಿಯಾದಾಗ ರೈತರು ಕ್ಯಾನ್‌ಗಳೊಂದಿಗೆ ಬೈಕ್‌ನಲ್ಲಿ ಬಂಕ್‌ಗೆ ಬರುವುದು ಸಾಮಾನ್ಯವಾಗಿತ್ತು. ಇದರಿಂದ ಅವರ ಕೆಲಸಕ್ಕೆ ಅನುಕೂಲವಾಗುತ್ತಿತ್ತು. ಆದರೆ ಈಗ ಸಾಧನೆಗಳನ್ನೇ ಬಂಕ್‌ಗೆ ತರಬೇಕಾಗಿದ್ದು ಅವೈಜ್ಞಾನಿಕ ನಿಯಮ ಎಂಬುದು ರೈತರ ಅಂಬೋಣ.

### 200 ಲೀಟರ್ ಡೀಸೆಲ್ ನಿಗದಿ

ಒಂದು ವಾಹನಕ್ಕೆ 200 ಲೀಟರ್ ಮಾತ್ರ ಡೀಸೆಲ್ ಹಾಗೂ 50 ಲೀ. ಪೆಟ್ರೋಲ್ ಮಾರಾಟ ಮಾಡಲಾಗುತ್ತಿದೆ. ಮೊದಲು ಎಷ್ಟು ಬೇಕಾದರೂ ಕೊಡುತ್ತಿದ್ದರು. ಆದರೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿಕೊಳ್ಳುತ್ತಾರೆಂಬ ಕಾರಣಕ್ಕೆ ಮಿತಿ ನಿಗದಿಗೊಳಿಸಲಾಗಿದೆ. ಈ ಹಿಂದೆ ಆಯಿಲ್ ಕಂಪನಿಯವರು ಸಾಲದ ರೂಪದಲ್ಲಿ ಪೆಟ್ರೋಲ್/ಡೀಸೆಲ್ ಸರಬರಾಜು ಮಾಡುತ್ತಿದ್ದರು. ಪ್ರಸ್ತುತ ಆ ವ್ಯವಸ್ಥೆಗೆ ಕಡಿವಾಣ ಹಾಕಲಾಗಿದೆ. ಜಿಲ್ಲೆಯಲ್ಲಿ ಒಟ್ಟು 226 ಪೆಟ್ರೋಲ್ ಬಂಕ್‌ಗಳಿದ್ದು ನಿತ್ಯ ಅಂದಾಜು 2 ಲಕ್ಷ ಲೀಟರ್ ಇಂಧನ ಮಾರಾಟವಾಗುತ್ತದೆ ಎನ್ನಲಾಗಿದೆ. ಬಿಪಿಸಿಎಲ್ 39, ಹೆಚ್‌ಪಿಸಿಎಲ್ 67, ಎಲ್‌ಒಸಿಎಲ್ 79, ಎಂಆರ್‌ಪಿಎಲ್ 4, ನಯಾರಾ 33 ಹಾಗೂ ರಿಲಯನ್ಸ್ ಕಂಪನಿಯ 4 ಬಂಕ್‌ಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

### ತಕ್ಷಣಕ್ಕೆ ಇಂಧನ ಸಿಗುತ್ತಿಲ್ಲ

ಮೊದಲಿಗೆ ಹೋಲಿಸಿದರೆ ಈಗ ಇಂಧನ ಪೂರೈಕೆಯಲ್ಲಿ ಭಾರೀ ವ್ಯತ್ಯಯವಾಗಿದೆ. ಇಂಡೆಂಟ್ ಹಾಕಿದ ದಿನವೇ ಎಷ್ಟು ಲೋಡ್ ಬೇಕಾದರೂ ಬಂಕ್‌ಗಳಿಗೆ ಬರುತ್ತಿತ್ತು. ಈಗ ಮೂರರಿಂದ ನಾಲ್ಕು ದಿನ ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ ಕಡಿಮೆ ಪ್ರಮಾಣದಲ್ಲಿ ಪೆಟ್ರೋಲ್-ಡೀಸೆಲ್ ಮಾರಾಟ ಮಾಡಿ ಬಂಕ್ ಬಂದ್ ಆಗದಂತೆ ನೋಡಿಕೊಳ್ಳುತ್ತಿದ್ದೇವೆ. ಬಹುಶ: ವಾರದ ಬಳಿಕ ನಾವು ಬಂಕ್ ಬಂದ್ ಮಾಡುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಸಿಬ್ಬಂದಿಯೊಬ್ಬರು ಅಭಿಪ್ರಾಯಪಟ್ಟರು.

### ರೈತರಿಗೆ ನೆರವಾಗಲು ಜಿಲ್ಲಾಡಳಿತಕ್ಕೆ ಒತ್ತಾಯ

ಟಿಲ್ಲರ್ ಅಥವಾ ಟ್ರ್ಯಾಕ್ಟರ್‌ನಲ್ಲಿ ಉಳುಮೆ ಮೊದಲಾದ ಕೃಷಿ ಕೆಲಸ ಮಾಡುವವರು ಜಮೀನಿನಿಂದ ಜಮೀನಿಗೆ ಹೋಗುತ್ತಾರೆ. ಮಾರ್ಗಮಧ್ಯೆ ಡೀಸೆಲ್ ಖಾಲಿಯಾದರೆ ಅವರು ಚಾಲಕ ಮಾಲೀಕರಿಗೆ ಕರೆ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಕ್ಯಾನ್‌ಗಳಲ್ಲಿ ತುಂಬಿಸಿಕೊಂಡು ಬರಲು ಬಂಕ್‌ಗೆ ಹೋದರೆ ಇಂಧನ ಕೊಡುವುದಿಲ್ಲ. ದಾರಿಯಲ್ಲೇ ನಿಂತ ಟ್ರ್ಯಾಕ್ಟರ್ ಅನ್ನು ತರುವುದಾದರೂ ಹೇಗೆ. ಸರ್ಕಾರ ಇಂತಹ ಸೂಕ್ಷ್ಮ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಕೃಷಿ ಕೆಲಸಗಳಿಗೂ ತೊಂದರೆ ನೀಡಿದರೆ ಹೇಗೆ ಎಂದು ರೈತರು ಪ್ರಶ್ನಿಸಿದ್ದಾರೆ.

# ಧರ್ಮ ಜಾಗೃತಿ ಪ್ರಚಾರಕ್ಕೆ ಮೂರನೇ ವರ್ಷದ ಸಂಭ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮನೆ ಮನೆಗೆ-ಮನ ಮನಕೆ ರೇಣುಕ ಧರ್ಮ ಜಾಗೃತಿ ಹಾಗೂ ತತ್ವ ಪ್ರಚಾರ ಕಾರ್ಯಕ್ರಮ ಮೂರು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಹಾಸನ ತಾಲ್ಲೂಕಿನ ಅಗಿಲೆ ಗ್ರಾಮದಲ್ಲಿರುವ ತೇಜೋದಯ ನಿರಾಶ್ರಿತರ ಆಶ್ರಮದಲ್ಲಿ ಸರಳ ಸಂಭ್ರಮಾಚರಣೆ ನಡೆಯಿತು.

ಸಂಸ್ಥಾನ ಹಿರೇಮಠ ಹಾಗು ಸಿದ್ಧಾಂತ ಶಿಖಾಮಣಿ ತತ್ವ ಪ್ರಸಾರ ಅಭಿಯಾನ ಸಮಿತಿಯಿಂದ ನಡೆಯುತ್ತಿರುವ ಅಭಿಯಾನ 36 ಸಂಚಿಕೆ ಪೂರೈಸಿದ್ದು ಸಮಾಜದಲ್ಲಿ ಧಾರ್ಮಿಕ ಮೌಲ್ಯ, ಸನಾತನ ಸಂಸ್ಕೃತಿ, ವೀರಶೈವ ಸಿದ್ಧಾಂತ ಹಾಗೂ ಮಾನವೀಯತೆ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಸಮಾರಂಭ ಅಂಗವಾಗಿ ಆಶ್ರಮದಲ್ಲಿರುವ ನಿರಾಶ್ರಿತರಿಗೆ ಹಾಗು ಅಗತ್ಯವಿರುವವರಿಗೆ ತರಕಾರಿ, ಅಕ್ಕಿ, ಬೇಳೆ, ಎಣ್ಣೆ ಸೇರಿ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಲಾಯಿತು.

ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ಮಾನವ ಸೇವೆಯೇ ಮಹಾದೇವನ ಸೇವೆಯಾಗಿದೆ. ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಧರ್ಮ ಪ್ರಚಾರದ ಜೊತೆಗೆ ದೀನ ದಲಿತರ, ನಿರಾಶ್ರಿತರ ಹಾಗೂ ಅಗತ್ಯವಿರುವವರಿಗೆ ನೆರವಾಗುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು. ಆಶ್ರಮದ ಸ್ಥಾಪಕ ಗಿರಿತೇಜ್, ನಿರಾಶ್ರಿತರು ಹಾಜರಿದ್ದರು.

# ಸಾಮರಸ್ಯದ ಬದುಕಿಗೆ ಸಂಗೀತ ಸಹಕಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸಂಗೀತ ಸಾಮರಸ್ಯದ ಬದುಕಿನ ಭಾಗವಾಗಿದ್ದು ಈ ಕ್ಷಣವು ನನ್ನ ಜೀವನದ ಅವಿಸ್ಮರಣೀಯ ಕ್ಷಣವಾಗಿದೆ ಎಂದು ನಾಚಾರವಮ್ಮ ಪ್ರಶಸ್ತಿ ಪುರಸ್ಕೃತ ಎ.ವಿ.ಆನಂದ್ ಅವರು ಸಂತಸ ವ್ಯಕ್ತಪಡಿಸಿದರು.

ತಾಲ್ಲೂಕಿನ ರುದ್ರಪಟ್ಟಣದ ರಾಮ ಮಂದಿರದಲ್ಲಿ ನಾಲ್ಕು ದಿನಗಳಿಂದ ರುದ್ರಪಟ್ಟಣ ಸಂಗೀತೋತವ ಸಮಿತಿ ಟ್ರಸ್ಟ್ ವತಿಯಿಂದ ಜರುಗುತ್ತಿರುವ 23ನೇ ವಾರ್ಷಿಕ ಸಂಗೀತೋತ್ಸವದಲ್ಲಿ ನಾಚಾರವಮ್ಮ ಪ್ರಶಸ್ತಿ ಮತ್ತು ಲಯಕಲಾ ಸ್ಪರ್ಶಮಣಿ ಬಿರುದು ಸ್ವೀಕರಿಸಿ ಮಾತನಾಡಿದ ಅವರು, ರುದ್ರಪಟ್ಟಣವು ಸಂಗೀತ ಕ್ಷೇತ್ರಕ್ಕೆ ಅನೇಕ ಅಪರೂಪದ ಕಲಾವಿದರನ್ನು ಕೊಡುಗೆಯಾಗಿ ನೀಡಿರುವ ಪುಣ್ಯ ಕ್ಷೇತ್ರವಾಗಿದೆ. ರುದ್ರಪಟ್ಟಣ ಸಂಗೀತೋತ್ಸವ ಸಮಿತಿಯು ವಾರ್ಷಿಕ ಸಂಗೀತೋತ್ಸವದ ಮೂಲಕ ರುದ್ರಪಟ್ಟಣದ ಸಂಗೀತದ ಪರಂಪರೆಯನ್ನು ಮುನ್ನಡೆಸುತ್ತಿರುವುದು ಅತ್ಯಂತ ಮಹತ್ವದ ಕೆಲಸ ಎಂದರು.

ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್ ನಿರ್ವಾಹಕ ವಿಶ್ವಸ್ಥ, ಗಾನಕಲಾಭೂಷಣ ವಿದ್ವಾನ್ ಆರ್. ಕೆ.ಪದ್ಮನಾಭ ಅವರು ಮಾತನಾಡಿ, ವಿದ್ವಾಂಸರಿಗೆ ಏನು ಬಹುಮಾನ ನೀಡಿದರೂ ಕಡಿಮೆಯೇ. ವಿದ್ವಾಂಸರಲ್ಲಿನ ವಿದ್ವತ್ ಮತ್ತು ಪ್ರಾವೀಣ್ಯತೆಯನ್ನು ಗೌರವಿಸುವುದು ನಮ್ಮ ಸಮಿತಿಯ ಮೂಲ ಉದ್ದೇಶವಾಗಿದೆ ಎಂದರು.

ಸಂಗೀತ ವಿದ್ವಾಂಸರಾದ ಶೇಷಮೂರ್ತಿ, ನಾಗರತ್ನ, ಚಂದ್ರಶೇಖರ್, ಸಿ.ಎ.ನಾಗರಾಜು, ಸಿ.ಎ.ಗುರುದತ್, ಸಿ.ಎ. ಶ್ರೀಧರ್, ಸಿ.ಎ.ನಟರಾಜ್ ಮತ್ತು ಬಿ.ಎಸ್. ರಮೇಶ್ ಅವರಿಗೆ ರುದ್ರಗಾನ ಕಲಾ ವಿಶಾರದ ಬಿರುದು ಪ್ರದಾನ ಮಾಡಲಾಯಿತು. ಕರ್ನಾಟಕ ಬ್ಯಾಂಕ್ ಎಜಿಎಂ ಕಿಶೋರ್ ಕುಲಕರ್ಣಿ, ಮುಖ್ಯ ಪ್ರಬಂಧಕ ಶಶಾಂಕ್, ಸಂಗೀತ ವಿದ್ವಾಂಸರಿದ್ದರು.

# ಮುಂದಿನ ಚುನಾವಣೆಗೆ ಗೋಪಾಲಸ್ವಾಮಿ ನಾಯಕತ್ವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಜಿಲ್ಲೆಯಲ್ಲಿ ಪಕ್ಷ ಸಂಘಟನೆಗೆ ವರಿಷ್ಠರು ಆಸಕ್ತಿ ತೋರುತ್ತಿಲ್ಲ ಎಂದು ಅಸಮಾಧಾನ ಹೊರ ಹಾಕಿದ್ದ ಕಾಂಗ್ರೆಸ್ ಮುಖಂಡರು ಮತ್ತೆ ಸಭೆ ನಡೆಸಿದ್ದು ಮುಂಬರುವ ಚುನಾವಣೆ ತಯಾರಿಗೆ ಒಮ್ಮತದ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಮುಖಂಡ ದಿ.ಹೆಚ್.ಸಿ.ಶ್ರೀಕಂಠಯ್ಯ ಅವರ ಪುತ್ರ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹೆಚ್.ಎಸ್.ವಿಜಯಕುಮಾರ್ ಅವರ ನಿವಾಸದಲ್ಲಿ ಇತ್ತೀಚೆಗೆ ಸಭೆ ಸೇರಿ ಚರ್ಚಿಸಿದ್ದಾರೆ.

ಹೇಮಾವತಿ ಸಕ್ಕರೆ ಕಾರ್ಖಾನೆ ಚುನಾವಣೆ, ಮುಂಬರುವ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆ ಸಮೀಪಿಸುತ್ತಿದ್ದು, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ ಗೋಪಾಲಸ್ವಾಮಿ



ನಾಯಕತ್ವದಲ್ಲಿ ನಡೆಯಲಿ ಎಂಬುದು ಮುಖಂಡರ ಅಭಿಪ್ರಾಯವಾಗಿದೆ. ಮುಂದಿನ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸುವ ನಿಟ್ಟಿನಲ್ಲಿ ಪಕ್ಷ ಸಂಘಟಿಸಬೇಕು. ಅದರ ನೇತೃತ್ವವನ್ನು ಗೋಪಾಲಸ್ವಾಮಿ ಅವರೇ ವಹಿಸಲಿ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ ಎನ್ನಲಾಗಿದೆ.

ತಾಲ್ಲೂಕಿನಲ್ಲಿ ಪಕ್ಷದ ಬಲವರ್ಧನೆಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಒತ್ತು ನೀಡಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕರನ್ನು ಆಯ್ಕೆ ಮಾಡಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸೋಣ ಎಂಬ ತೀರ್ಮಾನಕ್ಕೆ ಬರಲಾಯಿತು. ಜೊತೆಗೆ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಬೂತ್ ಮಟ್ಟದಲ್ಲಿ ಹಣ ಸಂಗ್ರಹಿಸುವ ಮೂಲಕ ಅತಿ ಜರೂರಾಗಿ ಭವನ ನಿರ್ಮಿಸಲು ಮುಖಂಡರ ಸಭೆ ನಡೆಸುವುದಾಗಿ ತಿಳಿಸಿದ್ದಾರೆ.

ಸಭೆಯಲ್ಲಿ ಎಂ.ಎ. ಗೋಪಾಲಸ್ವಾಮಿ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಪಕ್ಷ ಸಂಘಟನೆಗೆ ಒತ್ತು ನೀಡುವಂತೆ ಸೂಚಿಸಿದ್ದಾರೆ. 2028ರ ವಿಧಾನಸಭೆ ಚುನಾವಣೆಯಲ್ಲಿ ಶ್ರವಣಬೆಳಗೊಳ ಕ್ಷೇತ್ರ ಕಾಂಗ್ರೆಸ್ ವಶವಾಗಬೇಕೆಂದರೆ ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಬೇಕು. ಅದಕ್ಕಾಗಿ ಕಾರ್ಯಕರ್ತರು ಈಗಿನಿಂದಲೇ ಶ್ರಮ ವಹಿಸಬೇಕೆಂದರು.

ವೈಯಕ್ತಿಕ ಹಿತಾಸಕ್ತಿ ಬದಿಗಿಟ್ಟು ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಿದರೆ ಮಾತ್ರ ಗೆಲುವು ಸಾಧ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನಾಯಕತ್ವದಲ್ಲಿ 5 ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ತಾಲ್ಲೂಕು ಕೇಂದ್ರದಲ್ಲಿ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ. ಪಕ್ಷದ ಮುಖಂಡರು, ಕಾರ್ಯಕರ್ತರು, ಭವನ ನಿರ್ಮಾಣಕ್ಕೆ ಹೆಚ್ಚಿನ ಸಹಕಾರ ನೀಡುವಂತೆ ಮನವಿ ಮಾಡಿದರು ಎಂದು ತಿಳಿದುಬಂದಿದೆ.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಎಂ.ರಾಮಚಂದ್ರು, ಎಂ.ಕೆ. ಮಂಜೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಶಂಕರ್, ಉದಯ್ ಕುಮಾರ್ ಮೊದಲಾದವರಿದ್ದರು.

# ಡಾ. ಅಮೂಲ್ಯ ಅಂಗಡಿಗೆ 195ನೇ ರ್‍ಯಾಂಕ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಕಾಶವಾಣಿ ನಿವೃತ್ತ ಅಧಿಕಾರಿ ಹಾಗೂ ಲೇಖಕ ಡಾ. ವಿಜಯ ಅಂಗಡಿ, ಕೆ.ಎಂ.ಮಂಜುಳಾ ಅವರ ಪುತ್ರಿ ಡಾ. ಅಮೂಲ್ಯ ಅಂಗಡಿ ರಾಷ್ಟ್ರೀಯ ಮಟ್ಟದ ಏಮ್ಸ್ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯಲ್ಲಿ 195ನೇ ರ್‍ಯಾಂಕ್ ಪಡೆದಿದ್ದಾರೆ.

ಶಿವಮೊಗ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿರುವ ಡಾ. ಅಮೂಲ್ಯ ಅವರು ದೇಶದ ಪ್ರತಿಷ್ಟಿತ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಎಂ.ಡಿ. ಸ್ನಾತಕೋತ್ತರ ವೈದ್ಯಕೀಯ ವ್ಯಾಸಂಗಕ್ಕೆ ಪ್ರವೇಶ ಪಡೆಯಲು ಇದೇ ತಿಂಗಳು ನಡೆದ ರಾಷ್ಟ್ರೀಯ ಮಟ್ಟದ ಪರೀಕ್ಷೆಯಲ್ಲಿ ಈ ಸಾಧನೆ ಮಾಡಿದ್ದಾರೆ. ದೇಶಾದ್ಯಂತ ಇರುವ ಸುಮಾರು 20 ಏಮ್ಸ್ ಸಂಸ್ಥೆಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮುಂದುವರಿಸಲು ಅವರಿಗೆ ಅವಕಾಶ ಲಭ್ಯವಾಗಲಿದೆ. ಬೆಂಗಳೂರು ಮೂಲದ ಡಾ. ಭಾಟಿಯ ಕೋಚಿಂಗ್ ಕೇಂದ್ರದ ತರಬೇತಿ ಪಡೆದ ಅವರು ಶಿಸ್ತುಬದ್ಧ ಅಭ್ಯಾಸ ಹಾಗು ಪರಿಶ್ರಮದ ಮೂಲಕ ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಮೇ-26

1896: ವಿಶ್ವದ ಪ್ರಸಿದ್ಧ ಷೇರು ಮಾರುಕಟ್ಟೆ ಸೂಚ್ಯಂಕವಾದ ಡೌ ಜೋನ್ಸ್ ಇಂಡಸ್ಟ್ರಿಯಲ್ ಅವರೇಜ್ ಮೊದಲ ಬಾರಿಗೆ ಪ್ರಕಟವಾಯಿತು.

1923: ಫ್ರಾನ್ಸ್‌ನಲ್ಲಿ ವಿಶ್ವಪ್ರಸಿದ್ಧ 24 ಅವರ್ಸ್ ಆಫ್ ಲೆ ಮಾನ್ಸ್ ಕಾರು ರೇಸ್ ಮೊದಲ ಬಾರಿಗೆ ನಡೆಯಿತು.

1927: ಫೋರ್ಡ್ ಕಂಪನಿಯ ಐತಿಹಾಸಿಕ ಮಾಡೆಲ್ ಟಿ ಕಾರಿನ ಉತ್ಪಾದನೆ ಅಂತ್ಯಗೊಂಡಿತು.

1940: ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ಡಂಕರ್ಕ್ ಸ್ಥಳಾಂತರ ಕಾರ್ಯಾಚರಣೆ (ಆಪರೇಷನ್ ಡೈನಮೋ) ಆರಂಭವಾಯಿತು.

1972: ಅಮೆರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವೆ ಕ್ಷಿಪಣಿ ವಿರೋಧಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

1999: ವಿಶ್ವಕಪ್ ಕ್ರಿಕೆಟ್‌ನಲ್ಲಿ ಸೌರವ್ ಗಂಗೂಲಿ ಮತ್ತು ರಾಹುಲ್ ದ್ರಾವಿಡ್ 318 ರನ್‌ಗಳ ದಾಖಲೆಯ ಜೊತೆಯಾಟ ನಿರ್ಮಿಸಿದರು.

2014: ನರೇಂದ್ರ ಮೋದಿ ಅವರು ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

### ಜನನ

1983: ಸುಶೀಲ್ ಕುಮಾರ್, ಭಾರತದ ಖ್ಯಾತ ಕುಸ್ತಿಪಟು ಹಾಗೂ ಒಲಿಂಪಿಕ್ ಪದಕ ವಿಜೇತ

# ಕೆಪಿಎಸ್-ಮ್ಯಾಗ್ನೆಟ್ ಶಾಲೆಗೆ ಬಂದೂರು ಗ್ರಾಮಸ್ಥರ ವಿರೋಧ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕೆಪಿಎಸ್ ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ತಾಲ್ಲೂಕಿನ ಬಂದೂರು ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢ ಶಾಲೆಯನ್ನು ಜಾವಗಲ್ ಶಾಲೆಯೊಂದಿಗೆ ವಿಲೀನಗೊಳಿಸುವ ನಿರ್ಧಾರದ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿಯುತ್ತಿದೆ ಎಂದು ಸುಳ್ಳು ಹೇಳುತ್ತಿರುವ ಸರ್ಕಾರ ಶಾಲೆಗಳನ್ನು ಮುಚ್ಚಿ ಬಡ ಹಾಗೂ ಗ್ರಾಮೀಣ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಂದೂರು ಪ್ರಾಥಮಿಕ ಶಾಲೆಯಲ್ಲಿ 101 ಮತ್ತು ಪ್ರೌಢಶಾಲೆಯಲ್ಲಿ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ದಾಖಲಾತಿ ಉತ್ತಮವಾಗಿದ್ದರೂ ಶಾಲೆಯನ್ನು ಜಾವಗಲ್ ಮ್ಯಾಗ್ನೆಟ್ ಶಾಲೆಗೆ ವಿಲೀನಗೊಳಿಸಲು ಹೊರಟಿರುವುದು ಖಂಡನೀಯ ಎಂದರು.

ಸರ್ಕಾರಿ ಶಾಲೆಗಳನ್ನು ಹಂತ ಹಂತವಾಗಿ ದುರ್ಬಲಗೊಳಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ರಾಜ್ಯದ ಜನರು ಸರ್ಕಾರದ ಈ ಹುನ್ನಾರವನ್ನು ಅರಿಯಬೇಕು. ನಮ್ಮ ಗ್ರಾಮಗಳಲ್ಲಿನ ಶಾಲೆ ಉಳಿವಿಗೆ ಪ್ರಯತ್ನಿಸಬೇಕೆಂದು ಒತ್ತಾಯಿಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಪ್ರಮುಖ ಶಾಂತಸ್ವಾಮಿ ಮಾತನಾಡಿ, ಬಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿಂದುಳಿದ ವರ್ಗದ ಮಕ್ಕಳು ಇದೇ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ. ನಾವೆಲ್ಲರೂ ಇದೇ ಶಾಲೆಯಲ್ಲಿ ಓದಿದವರು. ಗ್ರಾಮದಲ್ಲಿ ಶಾಲೆ ಇರುವುದರಿಂದ ಜನರಿಗೆ ಅಗತ್ಯ ದಾಖಲೆಗಳು, ಪ್ರಮಾಣಪತ್ರ ಸೇರಿ ಅನೇಕ ಸರ್ಕಾರಿ ಕಾರ್ಯಗಳು ಸುಲಭವಾಗುತ್ತವೆ. ಶಾಲೆ ಮುಚ್ಚಿದರೆ ಗ್ರಾಮಸ್ಥರು ಸಣ್ಣ ಕೆಲಸಕ್ಕೂ ಅರಸೀಕೆರೆಗೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆಂದು ಆತಂಕ ವ್ಯಕ್ತಪಡಿಸಿದರು.

ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಗಿರೀಶ್ ಅವರು ಮಾತನಾಡಿ, ನಮ್ಮದು ಈ ಪ್ರೌಢಶಾಲೆಯ ಮೊದಲ ಬ್ಯಾಚ್. ಶಾಲೆ ಆರಂಭವಾದ ದಿನದಿಂದ ಇಂದಿನವರೆಗೂ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ.100 ಬಂದಿದೆ. ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ಶಾಲೆಗೆ ಬಣ್ಣ ಹಚ್ಚಿಸಿದ್ದೇವೆ. ಮೂಲಸೌಕರ್ಯ ಅಭಿವೃದ್ಧಿಗೆ ಸಹಕಾರ ನೀಡಿದ್ದೇವೆ. ಇಂತಹ ಉತ್ತಮ ಸಾಧನೆ ಮಾಡುತ್ತಿರುವ ಶಾಲೆಯನ್ನು ಮುಚ್ಚಲು ಮುಂದಾಗಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಸುಷ್ಮಾ, ಜಿಲ್ಲಾ ಉಪಾಧ್ಯಕ್ಷ ಅಭಿಷೇಕ್, ಗ್ರಾಮಸ್ಥರಾದ ಮೋಹನ್, ಬಸವಲಿಂಗೇಗೌಡ, ಪವನ್, ಮಂಜೇಗೌಡ, ದೇವರಾಜು, ಸುನಿಲ್, ರೇಣುಕ ಪ್ರಸಾದ್, ಶಾಂತಸ್ವಾಮಿ ಇತರರಿದ್ದರು.


# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 8.05 ಕೋಟಿ ರೂ.

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನುಗ್ಗೇಹಳ್ಳಿ: ರಾಜ್ಯದಲ್ಲಿ ಹೈನುಗಾರಿಕೆ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪ್ರಸ್ತುತ ಸಾಲಿನಲ್ಲಿ 511 ಕಾಮಗಾರಿಗೆ 8.05 ಕೋಟಿ ರೂ. ನೀಡಲಾಗಿದೆ ಎಂದು ಯೋಜನೆ ಜಿಲ್ಲಾ ನಿರ್ದೇಶಕಿ ಲೀಲಾವತಿ ತಿಳಿಸಿದರು.

ಶ್ರವಣಬೆಳಗೊಳ ಯೋಜನಾ ಕಚೇರಿ ವ್ಯಾಪ್ತಿಯ ಕಲ್ಕೆರೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಾಣಕ್ಕಾಗಿ 2 ಲಕ್ಷ ರೂ. ಸಹಾಯಧನದ ಡಿಡಿಯನ್ನು ಸಂಘದ ಆಡಳಿತ ಮಂಡಳಿಗೆ ಹಸ್ತಾಂತರಿಸಿ ಮಾತನಾಡಿದರು.

ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ




ಮೂಲಕ ಹಲವು ವರ್ಷಗಳಿಂದ ರಾಜ್ಯದ ಹೈನುಗಾರಿಕೆ ಬಲವರ್ಧನೆಗೆ ಡಾ. ಡಿ. ವೀರೇಂದ್ರ ಹೆಗಡೆ ಅವರ ಮಾರ್ಗದರ್ಶನದಲ್ಲಿ ಡೈರಿ ಕಟ್ಟಡ ನಿರ್ಮಾಣಕ್ಕೆ 1.50 ಲಕ್ಷದಿಂದ 3 ಲಕ್ಷ ರೂ. ವರೆಗೆ ಸಹಾಯಧನ ನೀಡಲಾಗುತ್ತಿದೆ ಎಂದು ಹೇಳಿದರು.

# ಕೇದಾರನಾಥ ಯಾತ್ರೆ ವೇಳೆ ಸಮಸ್ಯೆಗೆ ಸಿಲುಕಿದ ಮಹಿಳೆಗೆ ಸಂಸದರ ನೆರವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಕೇದಾರನಾಥ ಯಾತ್ರೆಗೆ ತೆರಳಿದ್ದ ವೇಳೆ ಉಸಿರಾಟ ಸಮಸ್ಯೆಯಿಂದ ಅಸ್ವಸ್ಥಗೊಂಡಿದ್ದ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿ ಮಲ್ಲೇನಹಳ್ಳಿ ಗ್ರಾಮದ ಎಂ.ಎನ್.ನಂದಿನಿ ಅವರನ್ನು ಹೆಲಿಕಾಪ್ಟರ್ ಮೂಲಕ ಸುರಕ್ಷಿತವಾಗಿ ಕರೆತರಲಾಗಿದ್ದು, ಸಂಸದ ಶ್ರೇಯಸ್ ಪಟೇಲ್ ಅವರಿಗೆ ಮಹಿಳೆ ಧನ್ಯವಾದ ಸಲ್ಲಿಸಿದ್ದಾರೆ.

ಹೈಕೋರ್ಟ್‌ನಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಿರುವ ನಂದಿನಿ ಅವರು ಕೇದಾರನಾಥ ಯಾತ್ರೆಯ ಸಂದರ್ಭದಲ್ಲಿ ಮಾರ್ಗಮಧ್ಯೆ ಉಸಿರಾಟದ ತೊಂದರೆಗೆ ಒಳಗಾಗಿದ್ದರು. ಈ ಕುರಿತು ಮಾಹಿತಿ ದೊರಕುತ್ತಿದ್ದಂತೆಯೇ ಸಂಸತ್ ಅಧಿಕಾರಿಗಳು ಹಾಗೂ ರುದ್ರಪ್ರಯಾಗ ಜಿಲ್ಲಾಧಿಕಾರಿ ವಿಶಾಲ್ ಮಿಶ್ರಾ ಅವರನ್ನು ಸಂಪರ್ಕಿಸಿದ ಶ್ರೇಯಸ್ ಪಟೇಲ್ ತ್ವರಿತ ಕ್ರಮಕ್ಕೆ ಸೂಚಿಸಿದ್ದರು. ಸಂಸದರ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ತಕ್ಷಣವೇ ಹೆಲಿಕಾಪ್ಟರ್ ಸುರಕ್ಷಿತ ಸ್ಥಳಕ್ಕೆ ಕಳುಹಿಸಿಕೊಟ್ಟಿದ್ದಾರೆ.

### ಅರ್ಧ ಗಂಟೆಯಲ್ಲಿ ತ್ವರಿತ ಕ್ರಮ

ಘಟನೆ ಕುರಿತು ಎಂ.ಎನ್. ನಂದಿನಿ ಮಾತನಾಡಿ, ಕೇದಾರನಾಥ ಯಾತ್ರೆಗೆಂದು ಹೋದಾಗ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಭಾವಿಸಿರಲಿಲ್ಲ. ಭಕ್ತರ ಸಂಖ್ಯೆ ವಿಪರೀತವಾಗಿತ್ತು. ಮಳೆ ವಿಪರೀತವಾಗಿದ್ದರಿಂದ ಭಾರೀ ಸಮಸ್ಯೆಯಾಯಿತು. ಸ್ಥಳೀಯ ವೈದ್ಯರ ಬಳಿ ಹೋದಾಗ ಆಕ್ಸಿಜನ್‌ಗೆ ನೆರವಾಗಲೆಂದು ಬಾಟಲಿ ಕೊಟ್ಟಿದ್ದರು. ಆದರೆ ಅದರಿಂದ ಪ್ರಯೋಜನವಾಗದ ಹಿನ್ನಲೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಅವರಿಗೆ ಕರೆ ಮಾಡಿದಾಗ ತಕ್ಷಣ ಅವರು ರುದ್ರಪ್ರಯಾಗ ಜಿಲ್ಲಾಧಿಕಾರಿ ಅವರನ್ನು ಸಂಪರ್ಕಿಸಿ ಹೆಲಿಕಾಪ್ಟರ್ ವ್ಯವಸ್ಥೆ ಮಾಡಿಸಿದರು. ಕರೆ ಮಾಡಿದ ಅರ್ಧಗಂಟೆಯೊಳಗೆ ನಾನು ಸುರಕ್ಷಿತ ಜಾಗ ತಲುಪಿದೆ. ಈ ಸಹಾಯಕ್ಕಾಗಿ ಶ್ರೇಯಸ್ ಪಟೇಲ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248